**APRIL 21, 2024**

**ALL INDIA RADIO- DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದುತ್ತಿರುವವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಭಾರತದ ವರ್ಚಸ್ಸು ಜಾಗತಿಕ ಮಟ್ಟದಲ್ಲಿ ವೃದ್ಧಿ; ಕಳೆದ 10 ವರ್ಷಗಳಲ್ಲಿ ಬಡವರ ಶ್ರೇಯೋಭಿವೃದ್ಧಿಗೆ ಆದ್ಯತೆ – ಪ್ರಧಾನಮಂತ್ರಿ ನರೇಂದ್ರ ಮೋದಿ.**
- **ರಾಜ್ಯದ 14 ಕ್ಷೇತ್ರಗಳಲ್ಲಿ ಮೊದಲ ಹಂತದ ಲೋಕಸಭೆ ಚುನಾವಣೆ; ಮನೆಯಿಂದಲೇ ಮತದಾನ ಮಾಡುವ ಪ್ರಕ್ರಿಯೆ, ಮುಕ್ತಾಯ.**
- **ರಾಜ್ಯದಲ್ಲಿ, 2ನೇ ಹಂತದ 14 ಲೋಕಸಭಾ ಕ್ಷೇತ್ರಗಳ ಚುನಾವಣೆಗೆ, ಒಟ್ಟು 335 ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ.**
- **'ಅಹಿಂಸಾ ಪರಮೋಧರ್ಮಃ' ಎಂಬ ತತ್ವ ಪ್ರತಿಪಾದಿಸಿದ, ಭಗವಾನ್ ಶ್ರೀ ಮಹಾವೀರ ಜಯಂತಿ ಇಂದು.**

<><><>

**ಈಗ ವಾರ್ತೆಗಳ ವಿವರ**

<><><>

**ಕಳೆದ ಹತ್ತು ವ ರ್ಷಗಳಲ್ಲಿ, ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳ ದಾಖಲಾತಿಯಲ್ಲಿ, ಪರಿಶಿ ಷ್ಟ ಜಾತಿ ಶೇಕಡ 44, ಪರಿಶಿ ಷ್ಟ ಪಂಗಡ ಸಮುದಾಯದ ವಿದ್ಯಾರ್ಥಿಗಳು ಶೇಕಡ 65 ರಷ್ಟು ಹಾಗೂ ಹಿಂದುಳಿದ ವರ್ಗಗಳ ಸಮುದಾಯಕ್ಕೆ ಸೇರಿದವರ ದಾಖಲಾತಿ, ಶೇಕಡ 45 ರ ಷ್ಟ ಹೆಚ್ಚಳವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಚಿಕ್ಕಬಳ್ಳಾಪುರ ತಾಲೂಕಿನ ಅಗಲಗುರ್ಕಿ ಬಳಿ, ಬಿಜೆಪಿ ಆಯೋಜಿಸಿದ್ದ, 'ವಿಜಯ ಸಂಕಲ್ಪ ಸಮಾವೇಶ'ದಲ್ಲಿ, ಮಾತನಾಡಿದ ಅವರು, ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳ, ಬಿಜೆಪಿ ಅಭ್ಯರ್ಥಿಗಳ ಪರ ಮತಯಾಚಿಸಿದರು.**

ಸಂವಿಧಾನ ಶಿಲ್ಪಿ ಡಾಕ್ಟರ್ ಬಿ.ಆರ್.ಅಂಬೇಡ್ಕರ್ ಅವರಿಗೆ ಸಂಬಂಧಿಸಿದ, ಐದು ಸ್ಥಳಗಳನ್ನು ತಮ್ಮ ಸರ್ಕಾರ ಪಂಚ ತೀರ್ಥ ಕ್ಷೇತ್ರಗಳನ್ನಾಗಿ ಘೋಷಿಸಿ ಅಭಿವೃದ್ಧಿ ಪಡಿಸಿದೆ. ಪರಿಶಿ ್ಟ ಜಾತಿ ಮತ್ತು ವರ್ಗಗಳು ಹಾಗೂ ಮಹಿಳೆಯರಿಗೆ ಆದ್ಯತೆ ನೀಡುವ ಸಲುವಾಗಿ, ರಾಷ್ಟ್ರಪತಿ ಸ್ಥಾನದಂತಹ ಅತ್ಯುನ್ನತ ಹುದ್ದೆಗಳನ್ನು ನೀಡಿದೆ ಎಂದರು.

ಮಾಜಿ ಪ್ರಧಾನಿ, ಜೆ.ಡಿ.ಎಸ್. ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡ ಪಾಲ್ಗೊಂಡಿದ್ದರು.

ಬಳಿಕ ಬೆಂಗಳೂರಿನ ಅರಮನೆ ಮೈದಾನದಲ್ಲಿ ವಿಜಯ ಸಂಕಲ್ಪ ಸಮಾವೇಶವನ್ನುದ್ದೇಶಿಸಿ ಮಾತನಾಡಿದ, ಪ್ರಧಾನಮಂತ್ರಿ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದಿಂದ ಬೆಂಗಳೂರು ನಗರದ ಅಭಿವೃದ್ಧಿ ಕುಂಠಿತವಾಗಿದೆ ಎಂದು, ಟೀಕಿಸಿದರು.

<><><>

ರಾಜ್ಯದ 14 ಲೋಕಸಭಾ ಸ್ಥಾನಗಳಿಗೆ ಮೊದಲನೇ ಹಂತದಲ್ಲಿ, ಇದೇ 26 ರಂದು ಶುಕ್ರವಾರ ಮತದಾನ ನಿಗದಿಯಾಗಿದೆ. ಈ ಚುನಾವಣೆಗೆ ಹಿರಿಯ ನಾಗರಿಕರು ಹಾಗೂ ವಿಶೇಷಚೇತನರು, ಮನೆಯಿಂದಲೇ ಮತದಾನ ಮಾಡುವ ಪ್ರಕ್ರಿಯೆ, ಮುಕ್ತಾಯವಾಗಿದೆ. ಮನೆಯಿಂದಲೇ ಮತದಾನ ಮಾಡುವುದನ್ನು ಆಯ್ಕೆ ಮಾಡಿಕೊಂಡಿದ್ದ, 36 ಸಾವಿರದ 689 ಮತದಾರರ ಪೈಕಿ, 85 ವ ರ್ಷ ಮೇಲ್ಪಟ್ಟ 35 ಸಾವಿರದ 131 ಮತದಾರರು ಹಕ್ಕು ಚಲಾಯಿಸಿದ್ದಾರೆ. 96 ಪ್ರತಿಶತ ವಿಶೇ ಷಚೇತನ ಮತದಾರರು ತಮ್ಮ ಮನೆಗಳಿಂದಲೇ ಮತದಾನ ಮಾಡಿದ್ದಾರೆ. ಎರಡೂ ವಿಭಾಗಗಳಲ್ಲಿ ಒಟ್ಟು 46 ಸಾವಿರದ 810 ಮತದಾರರು ತಮ್ಮ ಮನೆಗಳಿಂದಲೇ ತಮ್ಮ ಹಕ್ಕು ಚಲಾಯಿಸಿದ್ದಾರೆ.

<><><>

ಯಾದಗಿರಿ ವಿಧಾನಸಭಾ ಕ್ಷೇತ್ರ ಮತ್ತು, ರಾಯಚೂರು ಪರಿಶಿಷ್ಟ ಪಂಗಡ ಮೀಸಲು ಲೋಕಸಭಾ ಕ್ಷೇತ್ರದ, ಸಹಾಯಕ ಚುನಾವಣಾಧಿಕಾರಿ ಪ್ರಕಾಶ ಕುದರಿ, ಆಕಾಶವಾಣಿಗೆ ಮಾಹಿತಿ ನೀಡಿ, 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ವಿಶೇಷಚೇತನ ಮತದಾರರು, ಮನೆಯಲ್ಲಿಯೇ ಮತದಾನ ಮಾಡಲು, ಇದೇ 25 ಗುರುವಾರ ಹಾಗೂ 26 ಶುಕ್ರವಾರದಂದು, ನಿಗದಿಪಡಿಸಲಾಗಿದೆ ಎಂದರು.

<><><>

ಇಂದು "ನಮ್ಮ ನಡೆ, ಮತಗಟ್ಟೆಯ ಕಡೆ" ಜಾಗೃತಿ ಹಾಗೂ ಧ್ವಜಾರೋಹಣ ಕಾರ್ಯಕ್ರಮವನ್ನು, ಚುನಾವಣಾ ಆಯೋಗ ಆಯೋಜಿಸಿದೆ. ರಾಜ್ಯದಲ್ಲಿ ಇದೇ 26, ಶುಕ್ರವಾರದಂದು ಪ್ರಥಮ ಹಂತದ ಮತದಾನ ನಡೆಯಲಿದ್ದು, ಮತದಾರರ ಜಾಗೃತಿಗಾಗಿ ಎಲ್ಲ 14 ಲೋಕಸಭಾ ಕ್ಷೇತ್ರಗಳ, 112 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ, 30 ಸಾವಿರದ 577 ಮತಗಟ್ಟೆಗಳಲ್ಲಿ, ಇಂದು ಬೆಳಿಗ್ಗೆ 8 ಗಂಟೆಗೆ, ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು, ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ, ಮನೋಜ್‌ಕುಮಾರ ಮೀನಾ, ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ತಿಳಿಸಿದ್ದಾರೆ.

<><><>

18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆಯ, ರಾಜ್ಯದ ಪ್ರಥಮ ಹಂತದ ಮತದಾನ ಇದೇ 26 ರಂದು ಶುಕ್ರವಾರ, 14 ಲೋಕಸಭಾ ಕ್ಷೇತ್ರಗಳಲ್ಲಿ ಜರುಗಲಿದೆ.

ಚಾಮರಾಜನಗರ ಜಿಲ್ಲೆಯ ಗಡಿ, ಗೋಪಿನಾಥಂ ಗ್ರಾಮದ ಬಳಿಯ, ಹೊಗೇನೆಕಲ್‌ನಲ್ಲಿ ಕಾವೇರಿ ನದಿ ಮಧ್ಯ ಭಾಗದಲ್ಲಿ, ತೆಪ್ಪೋತ್ಸವದ ಮೂಲಕ, ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ, ಪಿ.ಎಸ್. ವಸ್ತ್ರದ್ ಮತದಾರ ಜಾಗೃತಿಗೆ ಚಾಲನೆ ನೀಡಿದರು.

ರಾಮನಗರ ಜಿಲ್ಲಾ ಸ್ವೀಪ್ ಸಮಿತಿ, ಸೆಲ್ಫಿ ವಿತ್ ವೋಟಿಂಗ್ ಮತ್ತು ಸಹಿ ಸಂಗ್ರಹ ಅಭಿಯಾನಕ್ಕೆ, ಜಿಲ್ಲಾ ಪಂಚಾಯತ್ ಸಿ.ಇ.ಓ. ದಿಗ್ವಿಜಯ್ ಬೋಡ್ಕೆ, ಚಾಲನೆ ನೀಡಿದರು.

ದಾವಣಗೆರೆ ಜಿಲ್ಲಾ ಸ್ವೀಪ್ ಸಮಿತಿ, ಮಂಗಳವಾರ 23 ರಂದು ಸಂಜೆ, ರೇಣುಕಾ ಮಂದಿರದಲ್ಲಿ, ಮತದಾನ ಜಾಗ್ರತಿ ಸಂಗೀತ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿದೆ.

ವಿಜಯಪುರ ಜಿಲ್ಲಾ ಸ್ವಿಪ್ ಸಮಿತಿಯಿಂದ, ವಿಮುಕ್ತ ದೇವದಾಸಿ ಪುನರ್ವಸತಿ ಯೋಜನೆ ಫಲಾನುಭವಿಗಳಿಗೆ, ಮತದಾನ ಜಾಗೃತಿ ಅಭಿಯಾನ ಜರುಗಿತು.

ವಿಜಯಪುರ ಜಿಲ್ಲೆಯ ಯುವ ಗಾಯಕಿ ಸಾಕ್ಷಿ ಹಿರೇಮಠ, ಪ್ರಸಕ್ತ ಚುನಾವಣಾ ಪರ್ವದ, ಮತದಾರ ಜಾಗ್ರತಿ ರಾಯಬಾರಿಯಾಗಿದ್ದಾರೆ. ಎಲ್ಲರೂ ಕಡ್ಡಾಯವಾಗಿ ಮತ ಚಲಾಯಿಸುವಂತೆ, ಆಕಾಶವಾಣಿ ಮೂಲಕ ಮನವಿ ಮಾಡಿದ್ದಾರೆ.

<><><>

ಯುವ ಗಾಯಕಿ ಸಾಕ್ಷಿ ಹಿರೇಮಠ 35 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಜ್ಯದಲ್ಲಿ, 2ನೇ ಹಂತದ 14 ಲೋಕಸಭಾ ಕ್ಷೇತ್ರಗಳ ಚುನಾವಣೆಗೆ, ಒಟ್ಟು 335 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಚುನಾವಣಾ ಆಯೋಗ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ, ಒಟ್ಟು 503 ನಾಮಪತ್ರಗಳನ್ನು ಆಯಾ ಜಿಲ್ಲೆಗಳ ಚುನಾವಣಾಧಿಕಾರಿಗಳಿಗೆ ಸಲ್ಲಿಸಿದ್ದಾರೆ.

ದಾವಣಗೆರೆ ಮತ ಕ್ಷೇತ್ರದಿಂದ ಅತೀ ಹೆಚ್ಚು 40 ಅಭ್ಯರ್ಥಿಗಳು ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗೆ ಮೀಸಲಾದ ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ, 11 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಒಟ್ಟು 109 ನಾಮಪತ್ರಗಳು ತಿರಸ್ಕೃತಗೊಂಡಿವೆ.

ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ಸ್ಪರ್ಧಿಸಲು ಬಯಸಿ, ಸೂಚಕರ ಖೊಟ್ಟಿ ಸಹಿ ಮಾಡಿ ನಾಮಪತ್ರ ಸಲ್ಲಿಸಿದ ಆರೋಪದ ಮೇಲೆ, ಹಾನಗಲ್ ತಾಲೂಕು ಬೊಮ್ಮನಹಳ್ಳಿ ನಿವಾಸಿ, ಸಿದ್ದಪ್ಪ ಕಲ್ಲಪ್ಪ ಪೂಜಾರ್ ಎಂಬುವರ ಮೇಲೆ, ದೂರು ದಾಖಲಿಸಲಾಗಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ರಘುನಂದನ್ ಮೂರ್ತಿ ತಿಳಿಸಿದ್ದಾರೆ.

ಸುರಪುರ ವಿಧಾನಸಭಾ ಕ್ಷೇತ್ರದ ಪರಿಶಿಷ್ಟ ಪಂಗಡ ಮೀಸಲು ಅಭ್ಯರ್ಥಿ ಉಪ ಚುನಾವಣೆಗೆ, ಕಾಂಗ್ರೆಸ್, ಬಿಜೆಪಿ, ಬಹುಜನ ಸಮಾಜ ಪಕ್ಷ ಮತ್ತು ನಾಲ್ವರು ಪಕ್ಷೇತರರು ಸೇರಿದಂತೆ, ಏಳು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಕಾಂಗ್ರೆಸ್ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರ ನಿಧನದಿಂದ, ಸುರಪುರ ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನ ತೆರವಾಗಿದೆ.

ನಾಮಪತ್ರ ಹಿಂಪಡೆಯಲು ನಾಳೆ ಸೋಮವಾರ ಕೊನೆ ದಿನವಾಗಿದೆ. ಮಧ್ಯಾಹ್ನ 3 ಗಂಟೆಯ ವರೆಗೆ ಅವಕಾಶ ನೀಡಲಾಗಿದೆ. ಮೇ 7, ಮಂಗಳವಾರ ಚುನಾವಣೆ ನಡೆಯಲಿದೆ.

<><><>

ಇಂದು ಭಗವಾನ್ ಶ್ರೀ ಮಹಾವೀರ ಜಯಂತಿ. 'ಅಹಿಂಸಾ ಪರಮೋಧರ್ಮಃ' ಎಂಬ ತತ್ವದ ಮೂಲಕ, ಜನರ ಪ್ರೀತಿಗೆ ಪಾತ್ರರಾದ, ಭಗವಾನ್ ಮಹಾವೀರರು, 24ನೇ ತೀರ್ಥಂಕರರು. ರಾಜ್ಯಾದ್ಯಂತ ಇಂದು ಶ್ರದ್ಧಾ ಭಕ್ತಿಯಿಂದ, ಸರಳವಾಗಿ ಶ್ರೀ ಮಹಾವೀರರ ಜಯಂತಿ ಆಚರಿಸಲಾಗುತ್ತಿದೆ. ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಧಾರವಾಡದ ಹಿರಿಯ ಸಾಹಿತಿ ಡಾಕ್ಟರ್ ಜಿನದತ್ತ ಹಡಗಲಿ.

<><><>

ಡಾ. ಜಿನದತ್ತ ಹಡಗಲಿ 44 ಸೆಕೆಂದುಗಳು

<><><>

ವಿಜಯಪುರದ ಐತಿಹಾಸಿಕ ಸ್ಮಾರಕ ಮೇಹತರ್ ಮಹಲಿನ ಎರಡು ಮೀನಾರ್‌ಗಳ ಪೈಕಿ, ಎಡ ಬದಿಯ ಮೀನಾರ್‌ಗೆ ಸಿಡಿಲು ಬಡಿದು, ಹಾನಿಯಾಗಿದೆ. ಪ್ರಮುಖ ಸ್ಮಾರಕ ಮೆಹತರ್ ಮಹಲ್ ಪುನರುಜ್ಜೀವನಕ್ಕೆ ಕ್ರಮ ಜರುಗಿಸಲಾಗಿದೆ ಎಂದು, ಭಾರತೀಯ ಪುರಾತತ್ವ ಇಲಾಖೆಯ, ಧಾರವಾಡ ವಲಯ ವ್ಯಾಪ್ತಿಯ, ವಿಜಯಪುರ ಉಪ ವಲಯದ ಹಿರಿಯ ಸಹಾಯಕ ಸಂರಕ್ಷಕ ವಿಜಯ್‌ಕುಮಾರ್ ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ.

<><><>

ವಿಜಯ್‌ಕುಮಾರ್ 35 ಸೆಕೆಂದುಗಳು

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಬಿ.ಬಸವಲಿಂಗಪ್ಪನವರ ಜನ್ಮ ದಿನಾಚರಣೆ ಅಂಗವಾಗಿ ಇಂದು, ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆ ಆವರಣದಲ್ಲಿ, ಮಹಾನಗರ ಪಾಲಿಕೆ ಗೌರವಾರ್ಪಿಸಲಿದೆ.

<><><>

ಧಾರವಾಡದ, ಆಲೂರ ವೆಂಕಟರಾವ ಪ್ರತಿಷ್ಠಾನ, ಮರು ಮುದ್ರಿಸಿದ, ಆಲೂರ ವೆಂಕಟರಾಯರ ಆಂಗ್ಲ ಕೃತಿ, "ಅ ಹ್ಯಾಂಡ್ ಬುಕ್ ಆಫ್ ಮಾಧ್ವಾಚಾರ್ಯಾಸ್ ಪೂರ್ಣಬ್ರಹ್ಮ ಫಿಲಾಸಫಿ'ಯನ್ನು, ಖ್ಯಾತ ಚಿಂತಕ ಡಾಕ್ಟರ್ ಗುರುರಾಜ ಕರ್ಜಗಿ, ಬಿಡುಗಡೆ ಮಾಡಿದರು.

<><><>

ಚಿಕ್ಕಮಗಳೂರು ಜಿಲ್ಲೆಯ, ಚಂದ್ರದ್ರೋಣ ಪರ್ವತ ಶ್ರೇಣಿಯ ತಾಣಗಳಾದ ಮುಳ್ಳಯ್ಯನಗಿರಿ, ದತ್ತ ಪೀಠ, ಕವಿಕಲ್ ಗಂಡಿ, ಮಾಣಿಕ್ಯ ಧಾರಾ ಹಾಗೂ ಸೀತಾಳಯ್ಯನಗಿರಿಗಳಲ್ಲಿ, ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸುವುದು ಮತ್ತು ಕೊಂಡೊಯ್ಯುವುದನ್ನು ನಿಷೇಧಿಸಲಾಗಿದೆ ಎಂದು, ಜಿಲ್ಲಾಡಳಿತ ತಿಳಿಸಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಭಾರತದ ವರ್ಚಸ್ಸು ಜಾಗತಿಕ ಮಟ್ಟದಲ್ಲಿ ವೃದ್ಧಿ; ಕಳೆದ 10 ವರ್ಷಗಳಲ್ಲಿ ಬಡವರ ಶ್ರೇಯೋಭಿವೃದ್ಧಿಗೆ ಆದ್ಯತೆ – ಪ್ರಧಾನಮಂತ್ರಿ ನರೇಂದ್ರ ಮೋದಿ.**
- **ರಾಜ್ಯದ 14 ಕ್ಷೇತ್ರಗಳಲ್ಲಿ, ಮೊದಲ ಹಂತದ ಲೋಕಸಭೆ ಚುನಾವಣೆ; ಮನೆಯಿಂದಲೇ ಮತದಾನ ಮಾಡುವ ಪ್ರಕ್ರಿಯೆ, ಮುಕ್ತಾಯ.**
- **ರಾಜ್ಯದಲ್ಲಿ, 2ನೇ ಹಂತದ 14 ಲೋಕಸಭಾ ಕ್ಷೇತ್ರಗಳ ಚುನಾವಣೆಗೆ, ಒಟ್ಟು 335 ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ.**
- **'ಅಹಿಂಸಾ ಪರಮೋಧರ್ಮಃ' ಎಂಬ ತತ್ವ ಪ್ರತಿಪಾದಿಸಿದ, ಭಗವಾನ್ ಶ್ರೀ ಮಹಾವೀರ ಜಯಂತಿ ಇಂದು.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>